



ಪಹಲ್ಗಾಮ್ ನೆಲದಲ್ಲಿ ಕನ್ನಡ ಸಂಸ್ಕೃತಿ

ಅನತಿ ದೂರದಲ್ಲೇ ಕಾಣುತ್ತದೆ. ಬೃಹತ್ ಎತ್ತರದ ಪೈನ್ ಮರಗಳ ನಡುವೆ ಮೂರು ಕಣಿವೆಗಳು ಕಾಣುತ್ತವೆ. ಅಲ್ಲಿರುವ ಬೈಸರನ್ ಕಣಿವೆಗೆ ವಾಹನಗಳು ಹೋಗುವುದಿಲ್ಲ, ಕುದುರೆ ಸವಾರಿಯಿಂದಷ್ಟೇ ಹೋಗಬೇಕು. ಆ ಕಣಿವೆಯ ಸುತ್ತಮುತ್ತಲು 6 ಕಿ.ಮೀ. ವ್ಯಾಪ್ತಿಯಲ್ಲಿ ಈಗ ಯಾರನ್ನೂ ಬಿಡುತ್ತಿಲ್ಲ. ಹೀಗಾಗಿ, ಅಲ್ಲಿಗೆ ಸಾಗುವ ರಸ್ತೆಯಲ್ಲೂ ಸ್ಮಶಾನಮೌನ. ಈ ಕಣಿವೆಗೆ ಎಡಭಾಗ ಹಾಗೂ ಲಿದ್ದರ್ ನದಿಯ ದಡದಲ್ಲಿ ಕರ್ನಾಟಕ ರಾಜ್ಯೋತ್ಸವ ಆಚರಿಸುವ ವೇದಿಕೆ ಸಜ್ಜಾಗಿತ್ತು. ನವೆಂಬರ್ 22ರ ಸಂಜೆ 4 ಗಂಟೆಗೆ ಕಾರ್ಯಕ್ರಮ ಆರಂಭ. ಕನ್ನಡದ ಗೀತೆಗಳು ಬೆಳಿಗ್ಗೆಯಿಂದಲೇ ಮೊಳಗುತ್ತಿದ್ದವು. ಹಿನ್ನೆಲೆ ಗಾಯಕಿ ಅನುರಾಧಾ ಭಟ್ ಗಾನಸುಧೆ ಆರಂಭವಾದ ಮೇಲೆ ಸಭಿಕರ ಸಂಭ್ರಮಕ್ಕೆ ಮೆರುಗು ಬಂದಿತು. ಲಿದ್ದರ್ ನದಿಯ ಜುಳುಜುಳು ನಿನಾದದೊಂದಿಗೆ, ಎರಡು ಡಿಗ್ರಿ ಸೆಲ್ಷಿಯಸ್‌ನ ಮೈನಡುಗುವ ಚಳಿಯಲ್ಲಿ ಡಾ. ರಾಜಕುಮಾರ್, ವಿಷ್ಣುವರ್ಧನ್, ಅಂಬರೀಶ್, ಶಂಕರನಾಗ್ ಸೇರಿದಂತೆ ಹಿರಿಯ ನಟರ ಕನ್ನಡಾಭಿಮಾನದ ಗೀತೆಗಳಿಗೆ ಅನುರಾಧಾ ಭಟ್ ಧ್ವನಿಯಾಗಿದ್ದರು.

‘ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು’ ಗೀತೆ ಸಭಿಕರನ್ನು ಕುಣಿಯುವಂತೆ ಮಾಡಿತ್ತು. ಪುನೀತ್ ರಾಜಕುಮಾರ್ ಅವರ ‘ರಾಜಕುಮಾರ’ ಚಿತ್ರದ ‘ಬೊಂಬೆ ಹೇಳುತೈತೆ...’ ಗೀತೆಗೆ ಇಡೀ ಸಭಾಂಗಣ ಪ್ರಕಾಶಮಾನವಾಗಿತ್ತು. ಎಲ್ಲರ ಮೊಬೈಲ್‌ಗಳ ಟಾರ್ಚ್ ಮಿನುಗುತ್ತಿದ್ದವು. ಡೊಳ್ಳು ಕುಣಿತ ಹಾಗೂ ಯಕ್ಷಗಾನ ಪ್ರದರ್ಶನದ ಮೂಲಕ ಪಹಲ್ಗಾಮ್‌ನಲ್ಲಿ ಕರ್ನಾಟಕದ ಸಂಸ್ಕೃತಿಯನ್ನು ಬಿತ್ತರಿಸಲಾಯಿತು. 2 ಡಿಗ್ರಿ ಸೆಲ್ಷಿಯಸ್‌ನಲ್ಲೂ ಡೊಳ್ಳು ಕುಣಿತದ ತಂಡ ತನ್ನ ವೇಷಭೂಷಣದಲ್ಲಿ ರಾಜಿ ಮಾಡಿಕೊಂಡಿರಲಿಲ್ಲ.


ಚಂದ್ರು ಅವರ ತಂಡ ಎಂದಿನಂತೆಯೇ ಕೈ–ಕಾಲು ಕಾಣುವಂತಹ ದಿರಿಸಿನಲ್ಲಿಯೇ ಡೊಳ್ಳು ಬಾರಿಸಿತು, ಕುಣಿದು ಕುಪ್ಪಳಿಸಿತು, ಎಲ್ಲರನ್ನೂ ತುದಿಗಾಲ ಮೇಲೆ ನಿಲ್ಲುವಂತೆ ಮಾಡಿತ್ತು. ಕನ್ನಡ ಬಾವುಟದೊಂದಿಗೆ ಗಣ್ಯರನ್ನು ಸ್ವಾಗತಿಸಲಾಯಿತು. ಮಡಿದವರರಿಗೆ ಶ್ರದ್ಧಾಂಜಲಿ, ನುಡಿನಮನವನ್ನೂ ಸಲ್ಲಿಸುವುದೇ ರಾಜ್ಯೋತ್ಸವದ ಮುಖ್ಯ ಉದ್ದೇಶವಾಗಿತ್ತು. ಎರಡೂವರೆ ಗಂಟೆ ನಡೆದ ಕಾರ್ಯಕ್ರಮದಲ್ಲಿ ಪಹಲ್ಗಾಮ್‌ನಲ್ಲಿ ಪ್ರವಾಸೋದ್ಯಮ ಮತ್ತೆ ಚಿಗುರಬೇಕೆಂಬ ಒತ್ತಾಸೆಯೂ ಇತ್ತು.

‘ನಮ್ಮ ಈ ಕಾರ್ಯಕ್ರಮ ಪ್ರವಾಸಿಗರಿಗೆ ಸಂದೇಶವಾಗಲಿ. ಪ್ರಕೃತಿ ಸೌಂದರ್ಯವನ್ನು ಕಣ್ತುಂಬಿಕೊಳ್ಳಲು ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಬರಲಿ. ಪ್ರವಾಸೋದ್ಯಮವನ್ನೇ ನಂಬಿಕೊಂಡಿರುವ ಈ ಪ್ರದೇಶ ಮತ್ತೆ ಸ್ವರ್ಗವಾಗಲಿ ಎಂದು ಆಶಿಸುತ್ತೇವೆ’ ಎಂದು ವೇದಿಕೆ ಮೇಲೆ ಹೇಳಿದ್ದು, ಪ್ರವಾಸೋದ್ಯಮವನ್ನೇ ನಂಬಿಕೊಂಡಿರುವ ಪಹಲ್ಗಾಮ್ ಜನರಲ್ಲಿ ಆಶಾಕಿರಣ ಮೂಡಿಸಿತ್ತು.

## ಮೈಕೊರೆಯುವ ಚಳಿಯಲ್ಲಿ ಅಡುಗೆ

ಕಾರ್ಯಕ್ರಮಕ್ಕೆ ಬೆಂಗಳೂರಿನಿಂದ 400ಕ್ಕೂ ಹೆಚ್ಚು ಕನ್ನಡಿಗರು ಪಹಲ್ಗಾಮ್‌ಗೆ ಬಂದಿದ್ದಾಗ ಅವರಿಗೆ ಊಟೋಪಚಾರವೂ ಕನ್ನಡ ಸೊಬಗಿನಂತೆಯೇ ನಡೆಯಬೇಕಲ್ಲವೇ? ಅದಕ್ಕೇ ಗ್ರೇಟರ್ ಬೆಂಗಳೂರು ಪ್ರಾಧಿಕಾರ– ನಗರ ಪಾಲಿಕೆಗಳ ಅಧಿಕಾರಿ– ನೌಕರರ ಕ್ಷೇಮಾಭಿವೃದ್ಧಿ ಸಂಘ ಅಡುಗೆಯವರನ್ನೂ ಕರ್ನಾಟಕದಿಂದಲೇ ಕರೆದುಕೊಂಡು ಹೋಗಿತ್ತು. ಮೈ ಕೊರೆಯುವ ಚಳಿಯಲ್ಲಿ ಅಡುಗೆ ಮಾಡುವುದು ಹೊಸ ಅನುಭವವಾಗಿದ್ದರೂ, ಉಪ್ಪಿಟ್ಟು, ಇಡ್ಲಿ, ಚಟ್ನಿ, ಸಾಂಬಾರು, ಪೂರಿ, ಸಾಗು, ಪಲಾವ್, ಸಾರು, ರಸಂ ಜೊತೆಗೆ ಮುದ್ದೆಯ ರುಚಿಯನ್ನೂ ಪಹಲ್ಗಾಮ್‌ನಲ್ಲಿ ಬಡಿಸಲಾಯಿತು. ಅಡುಗೆ ಎಂದ ಕೂಡಲೇ ನೀರು ಮುಖ್ಯ. ಇಲ್ಲಿ ನೀರಿಗೆ ಕೈಚಾಚುವುದೇ ಕಷ್ಟ. ಅಕ್ಕಿ, ತರಕಾರಿ ತೊಳೆಯಲು ಕೈ ಮರಗಟ್ಟುತ್ತದೆ. ಅದಕ್ಕೇ ಇಲ್ಲಿ ಎಲ್ಲದ್ದಕ್ಕೂ ಬಿಸಿ ನೀರು. ಮೈಥರಗುಟ್ಟುವ ವಾತಾವರಣದಲ್ಲೂ ಬಾಯಿ ಚಪ್ಪರಿಸುವ ಭೋಜನ ಬಡಿಸಿದರು.

ಕಾಶ್ಮೀರದಲ್ಲಿ ಪ್ರವಾಸೋದ್ಯಮದ ಋತು ಆರಂಭವಾಗುವುದು ಡಿಸೆಂಬರ್ ಮಧ್ಯಭಾಗದಿಂದಲೇ. ಆಗ ಅಲ್ಲಿ ರಸ್ತೆಯಲ್ಲೆಲ್ಲ ಹಿಮ. ಉಷ್ಣಾಂಶ ಮೈನಸ್‌ಗೆ ಇಳಿಯುತ್ತದೆ. ನವೆಂಬರ್‌ನಲ್ಲಿ ಚಳಿಯ ಆರಂಭವಷ್ಟೇ. ಆದರೂ ಪಹಲ್ಗಾಮ್‌ನಲ್ಲಿ ರಾತ್ರಿ –6 ಡಿಗ್ರಿ ಸೆಲ್ಷಿಯಸ್ ಚಳಿ ಕನ್ನಡಿಗರ ಮೈ ನಡುಗಿಸಿತ್ತು. ಪಹಲ್ಗಾಮ್‌ನ ಈ ಎಲ್ಲ ಸೊಬಗನ್ನೂ ಸವಿದು, ಲಿದ್ದರ್ ನದಿಯ ದಡದಲ್ಲಿ ನಿಂತು ‘ಐ ಲವ್ ಪಹಲ್ಗಾಮ್’ ಎಂಬ ಬರಹದೊಂದಿಗೆ ಸೆಲ್ಫಿ ತೆಗೆದುಕೊಳ್ಳುವಾಗ, ಅದರ ಪಕ್ಕದಲ್ಲೇ ಇರುವ ‘ಬೈಸರನ್ ಹುತಾತ್ಮರ ಸ್ಮಾರಕ’ ಕಣ್ಣಿಗೆ ಬೀಳುತ್ತದೆ. ಕಣ್ಣು ತೇವವಾಗುತ್ತದೆ. ಶ್ರದ್ಧಾಂಜಲಿ ಸಲ್ಲಿಸಿ, ಪಹಲ್ಗಾಮ್‌ಗೆ ವಿದಾಯ ಹೇಳುವಾಗ ಮನಸ್ಸು ಭಾರವಾಗುತ್ತದೆ. ಮುಂದೊಂದು ದಿನ ಬಂದಾಗ ಪಹಲ್ಗಾಮ್ ಪ್ರವಾಸಿಗರ ಸಂತಸದಲ್ಲಿ ಮುಳುಗಿರಲಿ ಎಂಬ ಆಶಾಭಾವ ಮೂಡುತ್ತದೆ. ‘ರಿಯಲಿ, ಐ ಲವ್ ಪಹಲ್ಗಾಮ್...’.



ಪಹಲ್ಗಾಮ್ ಕ್ಲಬ್ ಆ್ಯಂಡ್ ಕನ್ವೆಂಷನ್ ಸೆಂಟರ್
ಬೈಸರನ್ ಕಣಿವೆ ನೋಟ